(ಸದನವು 2 ಗಂಟೆ 20 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.40 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರಾದ (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ಮನವಿ ಇದೆ. ಸಿ.ಇ.ಟಿ. ವಿಚಾರದಲ್ಲಿ ನಿನ್ನೆ ನಾವು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯವರನ್ನು ಕರೆಸಿ ಮಾತನಾಡಿದೆವು. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಇವತ್ತು ಸಚಿವ ಸಂಪುಟದ ತುರ್ತು ಸಭೆಯನ್ನು ಸಂಜೆ 5 ಗಂಟೆಗೆ ಕರೆಯಲಾಗಿದೆ. 5 ಗಂಟೆಯೊಳಗೆ ತಾವು ಸದನ ಮುಂದೂಡಿ ಸಹಕಾರ ಕೊಟ್ಟರೆ ಮಂತ್ರಿಗಳು ಸಚಿವ ಸಂಪುಟದ ಸಭೆಯಲ್ಲಿ ಭಾಗವಹಿಸಲಿಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ತಾವು ಸಹಕರಿಸಬೇಕು.

ಅಧ್ಯಕ್ಷರು : ಈಗ ಸಮಯ 3.40 ಗಂಟೆ. 4.40 ಗಂಟೆಗೆ ನಾವು ಮುಗಿಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : 5 ಗಂಟೆಗೆ 5 ನಿಮಿಷ ಇದ್ದಾಗ ಸದನ ಮುಂದೂಡಿದರೂ ಸಹಿತ ನಡೆಯುತ್ತದೆ.

8. ವಿತ್ತೀಯ ಕಾರ್ಯಕಲಾಪಗಳ

ಆಯವ್ಯಯ, 2004-05ರ ಮೇಲಿನ ಚರ್ಚೆ (ಮುಂದುವರೆದಿದೆ)

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೇ, ತಾವು ಈಗ ಬಜೆಟ್ ಮೇಲೆ ಮಾತನಾಡುತ್ತೀರಾ ?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ಹೆಸರು ಕೊಟ್ಟಿದ್ದು ನಿಜ. ಬಜೆಟ್ ಮೇಲೆ ನಾನು ಈಗ ಮಾತನಾಡಬೇಕಾಗುತ್ತದೆ ಎಂಬ ಸೂಚನೆಯನ್ನೇ ಮುಂಚಿತವಾಗಿ ನನಗೆ ಕೊಟ್ಟಿರಲಿಲ್ಲ. ನಾನು ಆ resoluation ಮೇಲಿನ ಚರ್ಚೆಗೋಸ್ಕರ ತಯಾರಾಗಿ ಬಂದಿದ್ದೇನೆ. ನನಗೆ ಅವರು ತಿಳಿಸಲೇ ಇಲ್ಲ. ಈಗ ನಿಮ್ಮ ಸ್ಟಾಫ್ ಬಂದು ನನಗೆ ತಿಳಿಸಿದರು.

ಅಧ್ಯಕ್ಷರು : ಆಯಿತು. ಬಜೆಟ್ ಮೇಲೆ ಇನ್ಯಾರು ಮಾತನಾಡುತ್ತೀರಿ ?

ಶ್ರೀ ವಿಶ್ವನಾಥ ಮಾಮನಿ : ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಆಯಿತು, ಮಾತನಾಡಿ.

† **ಶ್ರೀ ವಿಶ್ವನಾಥ ಮಾಮನಿ (ಸವದತ್ತಿ)** : ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆ ವಿಶೇಷವಾಗಿ ಎಜುಕೇಷನ್ ಬಗ್ಗೆ ತಾವು ಎಷ್ಟು ಅನುದಾನವನ್ನು ಕೊಟ್ಟಿದ್ದೀರೋ, ಅದು ಸಾಲುವುದಿಲ್ಲ ಎಂದು ನನಗನ್ನಿಸುತ್ತಿದೆ. ಎಜುಕೇಷನ್ ಅಂದರೆ ಗ್ರಾಮೀಣ ಪ್ರದೇಶದಲ್ಲಿ ಕನ್ನಡ-ಪ್ರೈಮರಿ ಸ್ಕೂಲ್ ಏನಿವೆಯೋ, ಅವುಗಳಲ್ಲಿ ಒಂದೊಂದು ಕ್ಲಾಸ್‌ನಲ್ಲಿ ನಡೆಯುತ್ತಿವೆ. ಒಬ್ಬರೇ ಟೀಚರ್ ಇದ್ದಾರೆ. ಹೀಗಾದರೆ ಹೇಗೆ ? ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಹೇಗೆ ಎಂದು ನಾನು ಕೇಳುತ್ತಿದ್ದೇನೆ. ಒಂದು ಕ್ಲಾಸ್ ರೂಮ್‌ನಲ್ಲಿ ಒಬ್ಬರೇ ಟೀಚರ್, ಐದು ಕ್ಲಾಸ್ ನಡೆಯುತ್ತಿದೆ. ಎಜುಕೇಷನ್ ಎಂದರೆ, ನಾಡಿನ ಪ್ರಜೆಗಳಾಗತಕ್ಕಂಥ ಆ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆಯಾಗಬೇಕಸಾಗಿದೆ. ಅಲ್ಲಿ ಐದು ಕ್ಲಾಸ್ ಮಿನಿಯಮ್ ಇರಬೇಕು. ಒಂದು ಸ್ಕೂಲ್ ನಾವು ತಯಾರು ಮಾಡಿದರೆ, ಒಂದು ಕ್ಲಾಸ್ ಇದ್ದರೆ, ಒಂದು ಹಿಂದುಳಿದ ಪ್ರದೇಶದಲ್ಲಿ, ಗ್ರಾಮೀಣ ಮಟ್ಟದಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ಐದು ಕ್ಲಾಸ್ ರೂಮುಗಳಾದರೂ ಮಿನಿಮಮ್ ಆಗಿ ಇರಬೇಕು. ಐದು ಕ್ಲಾಸ್ ರೂಮುಗಳಿಗೆ ಐದು ಮಂದಿ ಟೀಚರ್ ಇರಬೇಕು. ಆ ಉದ್ದೇಶದಿಂದ ಎಜುಕೇಷನ್ ಸಲುವಾಗಿ ಸಾಕಷ್ಟು ಹಣ ಬಿಡುಗಡೆಯಾಗಬೇಕು ಎಂದು

ಕಟ್ಟಿದಾರೆ !! ನಮ್ಮ ಯಾವುದೇ ಫೈವ್ ಸ್ಟಾರ್ ಹೋಟೆಲ್ ಸಹ ಅದರ ಮುಂದೆ ನಿಲ್ಲುವುದಿಲ್ಲ ! ಅಧ್ಯಕ್ಷರೆ. ಸಮಾಜದಲ್ಲಿ ನಿಮ್ಮ ಅಂತಸ್ತನ್ನು ಏನಾದರೂ ಅಳೆಯಬೇಕಾಗಿದ್ದರೆ ಮಗಳಿಗೆ ಯಾವ choultry ಯಲ್ಲಿ ನೀವು ಲಗ್ನ ಮಾಡುತ್ತೀರಿ, ನಿಮ್ಮ ಮೊಮ್ಮಗ ಯಾವ ಕಾನ್ವೆಂಟ್‌ಗೆ ಓದುತ್ತಿದ್ದಾನೆ. ಆತನಿಗೆ ಅಕ್ಷರ ಬರಲಿ, ಬಾರದಿರಲಿ, ನೀವು ಯಾವ ಕಾರು ಇಟ್ಟುಕೊಂಡಿದ್ದೀರಿ ? ನಿಮ್ಮ ಮನೆ ಎಲ್ಲಿದೆ ? ನಿಮ್ಮ ಕಿಚನ್ ಇಟಾಲಿಯನ್ ಕಿಚನ್ ಹೌದೋ ಅಲ್ಲವೋ ? ಮಾರ್ಬಲ್ ಹಾಕಿದ್ದೀರೆಕೆ? ಗ್ರಾನೈಟ್ ಹಾಕಿದ್ದೀರೋ ? ಇವುಗಳನ್ನು ಆಧರಿಸಿ ನಮ್ಮ ನಿಮ್ಮ ಯೋಗ್ಯತೆಯನ್ನು ಜಡ್ಜ್ ಮಾಡತಕಕಂಥ ಸ್ಥಿತಿಗೆ ನಾವು ಬಂದು ತಲುಪಿದ್ದೇವೆ. ಒಂದು ಛತ್ರಕ್ಕೆ ಒಂದು ದಿವಸಕ್ಕೆ ಒಂದು ಲಕ್ಷ ರೂಪಾಯಿಗಳ ಬಾಡಿಗೆ ! ಇವತ್ತು ಹೋಗುವುದು, ನಾಳೆ ಖಾಲಿ ಮಾಡುವುದು. ಒಂದು ದಿವಸಕ್ಕೆ ಒಂದು ಲಕ್ಷ ರೂಪಾಯಿಗಳ ಬಾಡಿಗೆಯನ್ನು ಚೌಲ್ಟ್ರಿಗೆ ಕೊಟ್ಟು ಲಗ್ನ ಮಾಡಬೇಕಾಗಿದ್ದರೆ ಅವರ ಆದಾಯ ಎಷ್ಟಿರಬಹುದು ? ಆಯಿತು, ಅಷ್ಟು ಆದಾಯ ಇರತಕ್ಕಂಥವರು ಆದಾಯ ತೆರಿಗೆ ಇಲಾಖೆಗೆ ಕಾನೂನು ಬದ್ಧವಾಗಿ ತಮ್ಮ ಲೆಕ್ಕವನ್ನು ಒಪ್ಪಿಸುತ್ತಿದ್ದಾರೆಯೇ ? ಅಸೆಸೀಸ್ ಆಗಿದ್ದಾರೆಂಕ್ಸ್? ಇಲ್ಲವೇ ? ಯಾರೂ ಕೇಳುವವರೂ ಇಲ್ಲ, ವಿಚಾರಣೆ ಮಾಡುವವರೂ ಇಲ್ಲ. ಒಬ್ಬ ಇನ್‌ಕಂ ಇನ್ಸ್‌ಪೆಕ್ಟರ್ ಆ ಚೌಲ್ಟ್ರಿ ಹತ್ತಿರ ನಿಂತಿರಬೇಕು. ಯಾರಾದರೂ ಮದುವೆಗೆ ಚೌಲ್ಟ್ರಿ ಬುಕ್ ಮಾಡಲಿಕ್ಕೆ ಬರುತ್ತಾರೆಂದರೆ, ಯಾರು ಬುಕ್ ಮಾಡುತ್ತಾರೋ ಅವರು ನಾವು ಇನ್‌ಕಂ ಟ್ಯಾಕ್ಸ್ ಅಸೆಸೀಸ್, ನಮಗೆ ಇಷ್ಟು ಆದಾಯ ಇದೆ. ನಮ್ಮ ಸಂಪಾದನೆ ಇದು, ನಮ್ಮ ದುಡ್ಡಿನಿಂದ ಇದನ್ನು ನಾವು ಮಾಡುತ್ತಿದ್ದೇವೆ ಎಂದು ಹೇಳಲಿ. ಆಮೇಲೆ ಅವರಿಗೆ ಹೆಚ್ಚು ಟ್ಯಾಕ್ಸ್ ಹಾಕಬೇಕೋ, ಕಡಿಮೆ ಹಾಕಬೇಕೋ ಅಥವಾ ಮತ್ತೊಂದನ್ನು ಮಾಡಬೇಕೋ ಎಂಬುದನ್ನು ನೋಡೋಣ. ಆದರೆ ಲೆಕ್ಕವನ್ನೇ ಕೊಡದಿರುವವರು ಬೇರೆ ಬೇರೆ ಫೀಲ್ಡ್‌ನಲ್ಲಿ ಇರತಕ್ಕಂಥವರು, ಅಕ್ರಮವಾಗಿ ಹಣ ಸಂಪಾದನೆ ಮಾಡಿರತಕ್ಕಂಥವರಿಗೆ ತಮ್ಮ ಸಂಪತ್ತಿನ ಪ್ರದರ್ಶಕ್ಕೆ ಇದು ಒಂದು ಮಾರ್ಗ. ಅವನು ತನ್ನ ಸಂಪತ್ತಿನ ಪ್ರದರ್ಶನ ಮಾಡಿಕೊಂಡರೆ ನಿಮಗೇನ್ರಿ ಕಷ್ಟ ಎಂದು ನೀವು ಕೇಳಬಹುದು ? ಅದಕ್ಕೇ ನಾನು ಪ್ರಾರಂಭದಲ್ಲಿ ಹೇಳಿದ್ದು, ಗೌರವ, ಘನತೆಯಿಂದ ಬದುಕತಕ್ಕಂಥವರು, ಮಾನ-ಮರ್ಯಾದೆಯಿಂದ ಬದುಕತಕ್ಕಂಥವರು ಅಸಹಾಯಕರಾಗಿದ್ದಾರೆ. ಇವರು ಎಲ್ಲಾ ತಪ್ಪುಗಳನ್ನು ಮಾಡಿ ಮೆರೆಯುತ್ತಿದ್ದರೆ, ಅವರಿಗೆ ರಾಜಕಾರಣಿಗಳು ಸಪೋರ್ಟ್ ಆಗಿ ಇರುತ್ತಾರೆ. ಅವರು ಅಸಹಾಯಕರು. ಅವರು ಏನೂ ಮಾಡುವುದಕ್ಕಾಗುವುದಿಲ್ಲ. ಆ ಕಾರಣದಿಂದಲೇ ಒಂದು ಶಾಸನ ಇರಬೇಕು. ಇದರ ಉದ್ದೇಶ ಬಹಳ ಸಿಂಪಲ್. ಮದುವೆ ಆಗತಕ್ಕಂಥದ್ದು. It is a private affair. Close relatives ಸೇರಿಕೊಳ್ಳಬೇಕು. witness ಮಾಡಬೇಕು. endorse ಮಾಡಬೇಕು. ಅದರ ನೆಪದಲ್ಲಿ ಈ ರೀತಿ ಏನು ದುಂದು ವೆಚ್ಚವಾಗುತ್ತಿದೆಯೋ ಇದನ್ನು ತಡೆಗಟ್ಟತಕ್ಕಂಥ ಒಂದು ಜವಾಬ್ದಾರಿ ನಮ್ಮ ಮೇಲೆ ಇದೆ ಅನ್ನತಕ್ಕಂಥ ಉದ್ದೇಶದಿಂದ ನಾನು ಈ ಮಾತನ್ನು ಹೇಳಲಿಕ್ಕೆ ತಮ್ಮ ಮುಂದೆ ನಿಂತಿದ್ದೇನೆ, ಮುಖ್ಯ ವಿಷಯವಾದ 'ಮದುವೆ' ಏನಿದೆ. ಅದು ಇವತ್ತು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಬಿಟ್ಟಿದೆ. ಶ್ರಾವಣ ಮಾಸ ಶುರುವಾದರೆ ನಮಗೆಲ್ಲಾ ಲಗ್ನಪತ್ರಿಕೆಗಳು ಬರುತ್ತದೆ. ಒಂದೊಂದು ದಿವಸಕ್ಕೆ 15-20 ಮದುವೆಗಳು, ಅವುಗಳಿಗೆ ಹೋಗಲೇಬೇಕಾಗಿರುತ್ತದೆ. ಏಕೆಂದರೆ ಹಂಗಿನಲ್ಲಿ ಬದುಕುವವರು ನಾವು. ಯಾರೋ ಒಬ್ಬರನ್ನು ಹಿಡಿದಿರುತ್ತಾರೆ. ಏನು ಸ್ವಾಮಿ, ನಾನು ಅಷ್ಟು ಕಷ್ಟ ಪಟ್ಟೆ. ಅಷ್ಟೆಲ್ಲಾ ಕೆಲಸ ಮಾಡಿದೆ. ನಮ್ಮ ಹುಡುಗನ ಮದುವೆಗೆ ನೀವು ಬರದೇ ಹೋದಿರಿ ಎಂದು ಹೇಳುತ್ತಾರೆ. ಅವರಿಗೆ ಹೆದರಿ ನಾವು ಮದುವೆಗೆ ಹೋಗಲೇಬೇಕು. ಕೆಲವು ಮದುವೆಗಳಿಗೆ ನಾವು ಟೈಮ್ ಏನ್ನು

adjust ಮಾಡಿಕೊಳ್ಳಬೇಕಾಗುತ್ತದೆ. ನಾವು ಎರಡೂವರೆಗೆ ಹೋಗುತ್ತೇವೆ. ಆರೂವರೆಗೆ Reception ಎಂದು ಹಾಕಿರುತ್ತಾರೆ. ಅಲ್ಲಿ ಯಾರೂ ಇರುವುದಿಲ್ಲ. ಹೆಣ್ಣು ಮಗಳು ಬ್ಯೂಟಿಪಾರ್ಲರ್‌ಗೆ ಹೋಗಿದ್ದಾರೆ ಸ್ವಾಮಿ, ದಯವಿಟ್ಟು ಸ್ವಲ್ಪ ಹೊತ್ತು ಕುಳಿತುಕೊಳ್ಳಿ ಎಂದು ಹೇಳುತ್ತಾರೆ. ಅವರು ಬ್ಯೂಟಿಪಾರ್ಲರ್‌ನಿಂದ ಬರುವವರೆಗೆ ನಾವು ಅಲ್ಲಿ ಇರಲೇಬೇಕು. ಏಕೆಂದರೆ ನಾವು ಮದುವೆಗೆ ಹೋಗಿದ್ದೆವು ಎನ್ನುವುದಕ್ಕೆ ಸಾಕ್ಷಿಯಾಗಿ ವಿಡಿಯೋದಲ್ಲಿ ಬೀಳಬೇಕಲ್ಲ ! ವಿಡಿಯೋದಲ್ಲಿ ನಾವು ಬೀಳದೇ ಹೋದರೆ, ಆ ಮದುವೆ ಅಪೂರ್ಣವಾಗುತ್ತದೆ. ನೀನು ಸ್ಪೀಕರ್ ಆಗಿರು, ಎಂ.ಎಲ್.ಎ. ಆಗಿರು, ಚೀಫ್ ಮಿನಿಸ್ಟರ್ ಆಗಿರು, Defence Minister ಆಗಿರು, ಅವೆಲ್ಲಾ ಏನೂ ಮುಲಾಜು ಅಲ್ಲಿಲ್ಲ, ಅವು ಬರುವವರೆಗೆ ಕಾದಿದ್ದು, ಅಲ್ಲಿ ಹೋಗಿ ನಗು ಬರುತ್ತದೋ ಬರುವುದಿಲ್ಲವೋ, ನಿಮ್ಮ ಆರೋಗ್ಯ ಚೆನ್ನಾಗಿರುತ್ತೋ ಇರುವುದಿಲ್ಲವೋ, ನೀವು ಸಾಯುತ್ತಿರತ್ತೀರೋ, ಏನೋ, ಅವರನ್ನು ನಿಲ್ಲಿಸಿದ ತಕ್ಷಣ, ನೀವೂ ಲೈನ್-ಲೈನ್ ನಿಂತುಕೊಂಡು, ಒಂದು ನಾಟಕದ ಶೈಲಿಯಲ್ಲಿ ಹಲ್ಲುಗಿಂಜಬೇಕಾಗುತ್ತದೆ. ತುಟಿಗಳೆಲ್ಲಾ ಏಳ್ಕೊಂಡು ಹೋಗುತ್ತಿರುತ್ತದೆ, ಜೀವ ಹೊರಟೇ ಹೋಗುವಂತಾಗಿರುತ್ತದೆ. ಹಾಗಿದ್ದರೂ ಕೂಡ ನಾವು ಅಲ್ಲಿ ಹಲ್ಲುಗಿಂಜಬೇಕಾಗುತ್ತದೆ. ಹಲ್ಲುಗಿಂಜಿಯಾದ ಮೇಲೆ ಅವನು ಫೋಟೋ ತೆಗೆಯುತ್ತಾನೆ. ಅಮೇಲೆ ಆಲ್ಬಂ ಫೋಟೋಗಾಗಿ ಇನ್ನೊಬ್ಬ ಬರುತ್ತಾನೆ. ಅದೆಲ್ಲಾ ಆದ ಮೇಲೆ, ಅವರೆಲ್ಲಾ ಸೇರಿ ಪರ್ಮಿಷನ್ ಕೊಟ್ಟರೆ, ಆಯಿತಪ್ಪ ಎಂದು ಇನ್ನೊಂದು ಮದುವೆಗೆ ಹೋಗುತ್ತೇವೆ. ಸರಾಸರಿ ನೀವು ಲೆಕ್ಕ ಹಾಕಿದರೆ, ಆ ಹೂವಿನ ಅಲಂಕಾರಕ್ಕೆ ಛತ್ರದ ಬಾಡಿಗೆಗೆ, ಆ ಫೋಟೋಗಳಿಗೆ, ವಿಡಿಯೋಗ್ರಾಫರ್‌ಗೆ, ಆರ್ಕೆಸ್ಟ್ರಾಕ್ಕೆಂದು ಬಹಳಷು ವೆಚ್ಚವಾಗುತ್ತದೆ. ಆರ್ಕೆಸ್ಟ್ರಾ ಇದ್ದರೆ ಒಬ್ಬರು ಇನ್ನೊಬ್ಬರೊಡನೆ ಮಾತನಾಡುವುದಕ್ಕಾಗುವುದಿಲ್ಲ, ಏಕೆಂದರೆ ಅದರ ಶಬ್ದ ಅಷ್ಟೊಂದು ಇರುತ್ತದೆ. ಫುಲ್ ವಾಲ್ಯೂಮ್ ಇಟ್ಟುಬಿಟ್ಟಿರುತ್ತಾರೆ. ನಾವು ಯಾರಾದರೂ ಹೋದರೆ, ನಮ್ಮನ್ನು ನೋಡಿ, ನಮ್ಮನ್ನು ಇಂಪ್ರೆಸ್ ಮಾಡಬೇಕೆಂದು ಶಬ್ದವನ್ನು ಇನ್ನೂ ಜಾಸ್ತಿ ಮಾಡುತ್ತಾರೆ. ಇವನ್ನೆಲ್ಲಾ ನಾವು ಸಹಿಸಿಕೊಳ್ಳಬೇಕು. ಆಮೇಲೆ ಅಡಿಗೆ ಮಾಡುವವರದು ಒಂದು ಕಥೆ. ಅವರದ್ದು ದೊಡ್ಡ ಕಾರ್ಖಾನೆ. ಅವರೊಂದು ತರಹ Industrialist ಇದ್ದ ಹಾಗೆ. ಅವರುಗಳು ವಿಸಿಟಿಂಗ್ ಕಾರ್ಡ್ ಮಾಡಿಸಿ, ನಿಮಗೆ ನಾರ್ತ್ ಇಂಡಿಯನ್ ಫುಡ್ ಬೇಕಾ ? ಸೌತ್ ಇಂಡಿಯನ್ ಫುಡ್ ಬೇಕಾ ? ಸ್ವೀಟ್ ಎಷ್ಟಿರಬೇಕು ? ಅದೆಷ್ಟಿರಬೇಕು. ಇದೆಷ್ಟಿರಬೇಕು ಎಂದು ಕೇಳುತ್ತಾ ಎಲ್ಲದರ ಟ್ಯಾರಿಫ್ ಅನ್ನು ತಕ್ಷಣವೇ ಕೊಡುತ್ತಾರೆ. ಬೆಳಿಗ್ಗೆಗೆ ಏನು ಬೇಕು ? ಸಾಯಂಕಾಲಕ್ಕೆ ಏನು ಬೇಕು ? ದೋಸೆ ಅಲ್ಲೇ ಮಾಡಬೇಕಾ ? ಹೇಗೆ ಮಾಡಬೇಕು ? ಬಫೆ ಬೇಕಾ ? ಟೇಬಲ್ ಬೇಕಾ ? ಬಾಳೆಎಲೆ ಹಾಕಬೇಕಾ ? ತಟ್ಟೆ ಹಾಕಬೇಕಾ ? ಮುಂತಾಗಿ ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ. ಅವರು ಕೇಳುವಂತಹ ಪ್ರಶ್ನೆಗಳಿಗೆಲ್ಲಾ ಉತ್ತರವೇ ಹೇಳುವುದಕ್ಕಾಗುವುದಿಲ್ಲ. ನಾವು ಪ್ರಜ್ಞೆ ತಪ್ಪಿ ಹೋಗಿ ಬಿಡುತ್ತೇವೆ, ಇನ್ನು ಪುರೋಹಿತರು ಮೊಬೈಲ್ ಇಟ್ಟುಕೊಂಡಿರುತ್ತಾರೆ. ಅವರಿಗೆ ಬಹಳ ಅರ್ಜೆಂಟ್, ಅವರು ನೂರೈವತ್ತು ಕಡೆ ಒಪ್ಪಿಕೊಂಡಿರುತ್ತಾರೆ. ಇಲ್ಲಿ ಬೇಗ ಮುಗಿಸಿ ಅರ್ಜೆಂಟ್ ನಾನು ಹೋಗಬೇಕು ಸ್ವಾಮಿ, ಅಲ್ಲಿ ವಿಶ್ವೇಶ್ವರಪುರದಲ್ಲಿ ಸತ್ಯನಾರಾಯಣ ಪೂಜೆಗೆ ಒಪ್ಪಿಕೊಂಡಿದ್ದೇನೆ ಎಂದು ಹೇಳುತ್ತಾರೆ. ಅವನು ಹೇಳಿದ ಟೈಮಿಗೆ ತಾಳಿ ಕಟ್ಟಿದರೆ ಸರಿ, ಇಲ್ಲದಿದ್ದರೆ ಅವನು ಯಾವ ಮಂತ್ರ ಹೇಳಿರುತ್ತಾನೋ, ಅವನು ಹೇಳಿದಂತಹ ಮಂತ್ರ ಇವರಿಗೆ ಗೊತ್ತಾಗುವುದಿಲ್ಲ, ಇವರೇನು ಹೇಳುತ್ತಾರೋ ಅದು ಅವನಿಗೆ ಬೇಕಾಗಿಲ್ಲ, ಅರ್ಜೆಂಟಾಗಿ ನಾನು ಹೋಗಬೇಕಾಗಿದೆ ಎಂದು ಹೇಳಿ ಅವರ ಫೀಸ್ ಅನ್ನು ತೆಗೆದುಕೊಂಡು ಹೊರಟು ಹೋಗುತ್ತಾರೆ. ಅತ್ಯಂತ ಗೌರವದಿಂದ, ಪ್ರೀತಿ ವಾತ್ಸಲ್ಯದಿಂದ. ಸರಳವಾಗಿ

ಹಳ್ಳಿಗಾಡಿನಲ್ಲಿ ಮದುವೆ ಎಂದರೆ, ಕೆಲವು ಸಂಯುಕ್ತ ಕುಟುಂಬಗಳಿರುತ್ತಿದ್ದವು. ಸೋದರಿಕೆಯಲ್ಲಿಯೇ ಒಂದು ಸಂಬಂಧ ನೋಡುತ್ತಿದ್ದರು. ಸಣ್ಣವರಾಗಿದ್ದಾಗ ಇವರ ಮಗಳಿಗೆ ತಮ್ಮ ಮಗನನ್ನು ಕೊಡುವುದೆಂದು , ಇಲ್ಲವೇ ಇವರ ಮಗನಿಗೆ ತಮ್ಮ ಮಗಳನ್ನು ಕೊಡುವುದೆಂದು ನಿರ್ಧರಿಸಿ, ಎರಡೂ ಮನೆಗಳವರು ಸೇರಿಕೊಂಡು, ಹೆಚ್ಚೆಂದರೆ ಊರಿನ ಜನರಿರುತ್ತಿದ್ದರು. 'ಮದುವೆ' ಎನ್ನುವ ಕಾರ್ಯಕ್ರಮ ಒಂದು ಮಧ್ಯಾಹ್ನದಲ್ಲಿಯೇ ಜರುಗಿ ಹೋಗುತ್ತಿತ್ತು ಪಾಯಸ ತಿಂದು ಮುಗಿಸಿಬಿಡುತ್ತಿದ್ದರು. ಮದುವೆಯಾದ ಬಳಿಕ ಗಂಡು ಮತ್ತು ಹೆಣ್ಣನ್ನು ಮೆರವಣಿಗೆ ಕರೆದುಕೊಂಡು ಹೋಗುತ್ತಿದ್ದರು. ಏಕೆಂದರೆ, ಅವರಿಬ್ಬರೂ ಮಾರನೇ ದಿವಸ ಓಡಾಡುತ್ತಿದ್ದರೆ ಯಾರೂ ಅನುಮಾನಪಡಬಾರದೆಂಬ ಕಾರಣಕ್ಕಾಗಿ, ಹಿಂದಿನವರು ಎಷ್ಟು ಬುದ್ಧಿವಂತರಿದ್ದರೆಂಬುದನ್ನು ನೋಡಿ. ಎಂತಹ ಬುದ್ಧಿವಂತಿಕೆಯಿಂದ ಕೆಲವು ವಿಧಾನಗಳೆಲ್ಲವನ್ನೂ ರೂಪಿಸಿದ್ದರು ಅಂದರೆ, ಹುಡುಗನ ಕಡೆಯವರು ಹುಡುಗಿಯನ್ನು ನೋಡಲು ಹೋದಾಗ ಹೆಣ್ಣುಮಗಳು ಹಣ್ಣು–ಹಂಪಲು ತೆಗೆದುಕೊಂಡು ಬರಬೇಕು. ಕಾರಣ, ಅವಳಿಗೆ ಕಾಲು ಸರಿಯಾಗಿದೆಯೇ ? ಇಲ್ಲವೇ ? ಅಂಗವೈಕಲ್ಯವೇನಾದರೂ ಇದೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ, ಸರಿಯಾಗಿ ಮಾತನಾಡಲು ಬರುತ್ತದೆಯೇ, ಇಲ್ಲವೇ ಎಂಬುದಕ್ಕಾಗಿ 'ಒಂದು ಹಾಡು ಹೇಳಮ್ಮಾ' ಎನ್ನುತ್ತಿದ್ದರು. ಹಾಗೆಯೇ ಹುಡುಗಿಗೆ ಕಾಯಿಲೆ–ಕಸಾಲೆ ಏನಾದರೂ ಇದೆಯೇ? ಇಲ್ಲವೇ ? ಎಂಬುದನ್ನು ಖಚಿತಪಡಿಸಿಕೊಳ್ಳಲು ಹುಡುಗನ ಕಡೆಯವರು ಹುಡುಗಿಯನ್ನು ಸ್ನಾನ ಮಾಡಿಸಲು ಕರೆದುಕೊಂಡು ಹೋಗುತ್ತಿದ್ದರು. ಹಿಂದಿನವರು ನಮ್ಮಷ್ಟು ದೊಡ್ಡ ಮನುಷ್ಯರಲ್ಲ, ಹೆಚ್ಚು ಬುದ್ಧಿವಂತರಲ್ಲ, ಇಷ್ಟು ನಾಗರಿಕರೂ ಆಗಿರಲಿಲ್ಲ. ಆದರೆ, ಇಂತಹ ಪದ್ಧತಿಗಳಿಂದ ಅವರು ಎಷ್ಟು ಗೌರವದಿಂದ ಬದುಕುತ್ತಿದ್ದರೆಂಬುದನ್ನು ನೋಡಬಹುದು, ನಾವು ಬಹಳ ದೊಡ್ಡವರಾಗಿ ಇವ್ಹೊತ್ತು ನಮ್ಮ ಬದುಕನ್ನು ನಾವು ಆತಂಕದ ಸ್ಥಿತಿಗೆ ತಂದಿಟ್ಟುಕೊಂಡಿದ್ದೇವೆ. ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯ ವ್ಯವಸ್ಥೆ ಇದೆ. ಹಿಂದೂ ಧರ್ಮದಲ್ಲಿ ಗಂಡು–ಹೆಣ್ಣನ್ನು ನೋಡಿ ಒಪ್ಪಿಕೊಂಡ ಬಳಿಕ ಅವರನ್ನೂ ಪರಸ್ಪರ ಕೂರಿಸಿ ಮಾಂಗಲ್ಯಧಾರಣೆ ಮಾಡಿಸುತ್ತಾರೆ. ಸಂಬಂಧಿಕರೆಲ್ಲರೂ ಸೇರಿ ಹೆಣ್ಣನ್ನು ಧಾರೆಯೆರೆದು ಗಂಡಿನ ಕಡೆಯವರಿಗೆ ಕೊಡುತ್ತಾರೆ. 'ನಾವು ಕಷ್ಟಪಟ್ಟು ಸಾಕಿದ್ದೇವೆ, ನಮ್ಮ ಮಗು ನಮ್ಮ ಬಾಳಿನ ಕುಡಿ. ಇದು ನಿಮ್ಮ ಮನೆಯನ್ನು ಬೆಳಗಲಿ, ಸಂತೋಷವಾಗಿ ಕರೆದುಕೊಂಡು ಹೋಗಿ, ನಮ್ಮ ಮಗುವನ್ನು ಕಾಪಾಡಿ' ಎನ್ನುತ್ತಾರೆ. ಎಂತಹ ಅಂತಃಕರಣವನ್ನು ಕಲಕುವ ಸನ್ನಿವೇಶ. ಸಾಮಾನ್ಯವಾಗಿ ಹೆಣ್ಣಿನ ಕಡೆಯವರು ಧಾರೆಯೆರೆದು ಕೊಡುವಾಗ ಅವರಿಗೆ ಗೊತ್ತಿಲ್ಲದಂತೆಯೇ ಕಣ್ಣೀರು ಹಾಕುತ್ತಾರೆ ! ಇದಾದ ನಂತರ ಸಪ್ತಪದಿ ಮಾಡಿಸುತ್ತಾರೆ. ಗಂಡು–ಹೆಣ್ಣು ಒಬ್ಬರನ್ನೊಬ್ಬರು ಕೈ–ಕೈ ಹಿಡಿದು ಅಗ್ನಿಯ ಸುತ್ತ ಏಳು ಸುತ್ತು ಹಾಕುತ್ತಾರೆ. ಒಂದೊಂದು ಸುತ್ತಿಗೂ ಒಂದೊಂದು ವಿಶೇಷವಾದ ಅರ್ಥವಿದೆ. ಕಷ್ಟ–ಸುಖವನ್ನು ಸಮಪಾಲು ಮಾಡಿಕೊಂಡು ಪಾಲುದಾರರಾಗಿ ನಾವು ಬದುಕುತ್ತೇವೆಂದು ಸಾರ ಇದರಲ್ಲಡಗಿದೆ. ಆದರೆ, ಇವರು ಹೇಗೆ ಬದುಕುತ್ತಾರೆಂಬುದಕ್ಕೆ ಯಾವ ಗ್ಯಾರಂಟಿಯೂ ಇಲ್ಲ. ಈಗ ಮದುವೆಗೆ 'ಮೊದಲು ಹುಡುಗಿಯನ್ನು ನೋಡುವುದಿಲ್ಲ, ಛತ್ರ ನೋಡುತ್ತಾರೆ ! ಛತ್ರವನ್ನು ಮೊದಲು ನಿಗದಿಪಡಿಸಿ ಅನಂತರ ಹುಡುಗಿಯನ್ನು ನೋಡಲು ಹೋಗುತ್ತಾರೆ. 'ನಮ್ಮ ಹುಡುಗ ಇಂತಹ ದಿನಾಂಕದಂದು ಬರುತ್ತಾನೆ, ಆತನಿಗೆ ಒಂದೇ ವಾರ ಸಮಯವಿರುವುದು, ಅಷ್ಟರೊಳಗೆ ಹುಡುಗಿಯನ್ನು ಕರೆದುಕೊಂಡು ಬನ್ನಿ' ಎಂದು ಹೇಳುತ್ತಾರೆ. ಛತ್ರ ಹುಡುಕುವಾಗಲೂ ಅಂತಸ್ತು ! ಪ್ರೈಮರಿ ಸ್ಕೂಲ್ ಮೇಷ್ಟ್ರಿಗೆ ಒಂದು ಅಂತಸ್ತು,. ಪೋಲೀಸ್ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದು, ಆತ ಟ್ರಾಫಿಕ್‌ನಲ್ಲಿದ್ದರೆ ಅವರ ಅಂತಸ್ತೇ ಬೇರೆ ! ಎಕ್ಸೈಸ್‌ನಲ್ಲಿದ್ದರೆ

ಅವರ ಅಂತಸ್ತು ಇನ್ನೂ ಜಾಸ್ತಿಯಾಗುತ್ತದೆ. ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಎಂಎಲ್‌ಎ, ಬೋರ್ಡ್, ಕಾರ್ಪೋರೇಷನ್‌ನ ಅಧ್ಯಕ್ಷರೇನಾದರೂ ಆಗಿದ್ದರೆ ಅವರನ್ನು ಕೇಳುವ ಪ್ರಶ್ನೆಯೇ ಇಲ್ಲ,. ಟ್ರಾಫಿಕ್ ಬ್ಲಾಕ್ ಆಗುತ್ತದೆ !! ಮದುವೆ ಯಾರದು ? ಟ್ರಾಫಿಕ್ ಏಕೆ ಬ್ಲಾಕ್ ಆಗಬೇಕು ? ಇದು ನಮ್ಮ ಚಿಂತೆಯಾಗಿದೆ. ಎರಡು ಜೀವಗಳು ಒಟ್ಟಾಗಿ ಘನತೆ–ಗೌರವದಿಂದ ಬಾಳು ನಡೆಸಿಕೊಂಡು ಹೋಗುವುದಕ್ಕೆ ಈ ತರಹದ ಆಡಂಬರವೆಲ್ಲಾ ಏಕೆ ? ನ್ಯಾಯಬದ್ಧವಾಗಿ ಸಂಪಾದನೆ ಮಾಡಿರುವವರು, ಸಂಪತ್ತು ಇಟ್ಟುಕೊಂಡಿರುವವರು, ಈ ದೇಶದ ಎಲ್ಲಾ ಕಾನೂನುಗಳ ಪ್ರಕಾರ ತೆರಿಗೆ ಕೊಟ್ಟವರು, ಲೆಕ್ಕ ಕೊಟ್ಟವರು ಒಂದು ವೇಳೆ ಖರ್ಚು ಮಾಡಿದರೆ ಅವರು 'ಉಳ್ಳವರು' ಎಂದು ಹೇಳುವ ಮೂಲಕ ಅವರದೊಂದು ವರ್ಗ ಮಾಡೋಣ. ಲೆಕ್ಕದ ಪ್ರಕಾರ ಸಾಮಾನ್ಯರು, ಖರ್ಚಿನ ದೃಷ್ಟಿಯಿಂದ ಬಹಳ ದೊಡ್ಡವರು ! ಯಾರು ಅಕ್ರಮವಾಗಿ ಹಣ ಗಳಿಸುತ್ತಾರೆ. ಆಶ್ಲೀಲ ಸಂಪತ್ತನ್ನು ತಮ್ಮದಾಗಿಸಿಕೊಂಡಿದ್ದಾರೆ. ಅವರು ತಮ್ಮೆಲ್ಲಾ ತಪ್ಪುಗಳನ್ನು ಮುಚ್ಚಿಟ್ಟು ತಮ್ಮನ್ನು ಸಮಾಜದಲ್ಲಿ ಗಣ್ಯರ ಸ್ಥಾನಕ್ಕೆ promote ಮಾಡಿಕೊಳ್ಳುವುದಕ್ಕೆ ಇಂತಹ ಸಂದರ್ಭಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರಸ! ಇದಕ್ಕೆ ಸಾಕ್ಷಿಗಳಾಗಿ ನಾವು ಹೋಗಬೇಕು, ಶಾಸಕರು ಹೋಗಬೇಕು, ಸಭಾಧ್ಯಕ್ಷರು ಹೋಗಬೇಕು, ಮಂತ್ರಿಗಳು ಬರಬೇಕು ಮುಖ್ಯಮಂತ್ರಿಗಳು ಬರಬೇಕು, ಲೋಕಸಭಾ ಸದಸ್ಯರು ಬರಬೇಕು !! 'ನಿಮ್ಮ ಹೆಸರನ್ನು ಹಾಕಿದ್ದೇವೆ, ನೀವು ಬರಲೇಬೇಕು' ಎನ್ನುತ್ತಾರೆ. ಇದಕ್ಕೆ ನಾವೆಲ್ಲರೂ ಸಾಕ್ಷಿಗಳು, ಇವರನ್ನು ಉತ್ತಮರ ಸ್ಥಾನಕ್ಕೆ promote ಮಾಡುವುದಕ್ಕೆ ಈ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ನಾವೆಲ್ಲಾ ಒಪ್ಪಿಗೆ ಕೊಟ್ಟಿದ್ದೇವೆ, ಇವರು ಯಾವು ಲುಚ್ಚಾ ಕೆಲಸ ಮಾಡಿದ್ದರೂ, ಹಲ್ಕಾ ಕೆಲಸ ಮಾಡಿ ದುಡ್ಡು ಸಂಪಾದನೆ ಮಾಡಿದ್ದರೂ ಅದು ದೊಡ್ಡ ವಿಚಾರವಲ್ಲ. ಇವರನ್ನು ಇಲ್ಲಿಂದ ಗೌರವಸ್ಥರನ್ನಾಗಿ ಕಾಣಬೇಕೆಂಬ ಉದ್ದೇಶಕ್ಕಾಗಿ, ಏಕೆಂದರೆ, ಗೌರಸ್ಥರಾದ, ದೊಡ್ಡ ಮನುಷ್ಯರಾದ ನಾವು ಬಂದಿದ್ದೇವೆಂದು ಹೋಗಿ attest ಮಾಡುತ್ತೇವೆ. ಅಯಿತು, ಇದ್ದವರು ಅದನ್ನು ಮಾಡುತ್ತಾರೆ. ಇಲ್ಲದಿರುವವರ ಗತಿಯೇನು ? ನಾಲ್ಕು ಜನ ಅಣ್ಣ–ತಮ್ಮಂದಿರಿರುತ್ತಾರೆ. ಒಬ್ಬನಿಗೆ ಏನೋ ಅದೃಷ್ಟ ಇರುತ್ತದೆ. ಆತ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲೋ. ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲೋ ಇರುತ್ತಾನೆ, ಅನುಕೂಲವಾಗಿರುತ್ತಾನೆ. ಆತನಿಗೆ ಮದುವೆ ಮಾಡಲು ಪ್ರಯತ್ನ ಮಾಡುತ್ತಾರೆ. ಅಣ್ಣ–ತಮ್ಮಂದಿರಲ್ಲಿ ಇನ್ನೊಬ್ಬನಿಗೆ ಯಾವುದೇ ಅನುಕೂಲ ಸಿಕ್ಕಿರುವುದಿಲ್ಲ. ನಾನು ಹೇಳಿದಂತೆ ಆತ ಸ್ಕೂಲ್ ಮೇಷ್ಟು ಆಗಿರುತ್ತಾನೆ. ತನ್ನ ಅಣ್ಣ ತನ್ನ ಮಗಳಿಗೆ ಮದುವೆ ಮಾಡುವಾಗ ಮದುವೆ ಕಾರ್ಯಕ್ರಮದಲ್ಲಿ ಅಣ್ಣ–ತಮ್ಮಂದಿರೊಂದಿಗೆ ರಕ್ತ ಹಂಚಿಕೊಂಡು ಹುಟ್ಟಿರುವ ಈತ ಧೈರ್ಯದಿಂದ ಪಾಲ್ಗೊಳ್ಳುವುದಕ್ಕಾಗವುದೇ ಇಲ್ಲ. ಈತ ಅಲ್ಲಿ ಬೇರೆಯಾಗಿ ಕಾಣುತ್ತಾನೆ ! ಇವನಿಗೆ ಅಲ್ಲಿ ನೆಮ್ಮದಿಯ ಸ್ಥಾನ ಇರುವುದಿಲ್ಲ, ಅನಂತರ, ಛತ್ರದ ಕುರಿತು ಹೇಳುವುದಕ್ಕೇನಾದರೂ ಮಿತಿಗಳಿವೆಯೇ ? 'ಛತ್ರ' ಎನ್ನುವ ಪದದ ನಿಜವಾದ ಅರ್ಥವೆಂದರೆ, ದೂರದ ಪ್ರಯಾಣ ಮಾಡತಕ್ಕಂಥವರು ಪ್ರಯಾಣದ ಮಧ್ಯೆ ಸುಸ್ತಾದಾಗ ಅವರಿಗೆ ಆ ಸ್ಥಳದಲ್ಲಿ ಪರಿಚಿತರಾರೂ ಇರುವುದಿಲ್ಲವಾದ್ದರಿಂದ ಪರಸ್ಥಳದಲ್ಲಿ ತಂಗಿ ಹೋಗಲು ಒಂದು ಜಾಗ ಇರುತ್ತದೆ. ಅದಕ್ಕೆ 'ಧರ್ಮಛತ್ರ' ಎಂದು ಹಿಂದೆ ಕರೆಯುತ್ತಿದ್ದರು. ಸುಮಾರು 20–25 ವರ್ಷಗಳ ಹಿಂದೆ ಮದುವೆ ಕಾರ್ಯಕ್ರಮಗಳನ್ನು ಪಟ್ಟಣ ಪ್ರದೇಶಗಳಲ್ಲಿ ಮಾಡಬೇಕಾಗಿದ್ದರೆ, ಆಗ ಮನೆಗಳು ಬಹಳ ಚಿಕ್ಕದಾಗಿರುತ್ತಿದ್ದ ಕಾರಣ ಮದುವೆ ಸಮಾರಂಭ ಏರ್ಪಡಿಸಲು ಸುಮಾರಾಗಿ ಇರತಕ್ಕ ಯಾವುದೋ ಒಂದು ಛತ್ರ ಹುಡುಕುತ್ತಿದ್ದರು. ಛತ್ರದಲ್ಲಿ 100–150–200 ಮಂದಿ ಸೇರಿ ಮದುವೆ ಕಾರ್ಯಕ್ರಮ ಮುಗಿಸುತ್ತಿದ್ದರು. ಆದರೆ, ಇವ್ಹೊತ್ತು ಛತ್ರಗಳನ್ನು

ನನಗನ್ನಿಸುತ್ತಿದೆ. ಈಗ ನೀಡಿರುವಂತಹ ಅನುದಾನ ಸರಿಯಾಗಿ ಸಾಲುತ್ತಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಅದು ಅಲ್ಲದೆ, ಈ medical facilities ಬಗ್ಗೆ ನಾನು ಕೇಳುತ್ತಿದ್ದೇನೆ. ಮೂಲಭೂತ ಸೌಲಭ್ಯಗಳು ಒದಗಿಸಿಕೊಡತಕ್ಕಂಥದ್ದು ಸರ್ಕಾರದ ಕರ್ತವ್ಯ. ಈಗ ಆರೋಗ್ಯದ ದೃಷ್ಟಿಯಿಂದ ಒಂದು ಪಿ.ಹೆಚ್.ಸಿ. ತೆರೆಯಬೇಕಾದರೆ 25 ಸಾವಿರ ಜನಸಂಖ್ಯೆ ಇರಬೇಕು ಎಂದು ಹೇಳುತ್ತಾರೆ. 25 ಸಾವಿರ ಜನಸಂಖ್ಯೆಗೆ ಒಬ್ಬ ಡಾಕ್ಟರ್ ಎಂದರೆ ಅದು ಸರಿಯಾಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನನ್ನ ಪ್ರಕಾರ ಎರಡು ಪಂಚಾಯಿತಿ ಕೂಡಿ ಒಬ್ಬರು ಡಾಕ್ಟರ್ ಆದರೂ ಇರಬೇಕು. ಔಷಧಿ ವಿತರಣೆ ಮಾಡಲಿಲ್ಲವೆಂದರೂ ಸಹ ಪರೀಕ್ಷೆ ಮಾಡಲಿಕ್ಕಾಗಿ ಕನಿಷ್ಟ ಒಬ್ಬ ಡಾಕ್ಟರ್ ಆದರೂ ಇರಬೇಕು ಎನ್ನುವುದು ನನ್ನ ಅಭಿಪ್ರಾಯ. ಇರಿಗೇಷನ್ ಬಗ್ಗೆ ಮಾತನಾಡುವುದಾದರೆ, ನನಗೆ ಬರತಕ್ಕಂಥ ಮಲಪ್ರಭಾ ಪ್ರಾಜೆಕ್ಟ್‌ನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇರತಕ್ಕಂಥ ಇರಿಗೇಷನ್ ರೋಡ್ಸ್ ಏನಿವೆಯೋ, ಆ ಯಾವ ರೋಡ್ಸ್ ಕೂಡ ಸರಿಯಾಗಿಲ್ಲ. ಅಲ್ಲಿ ರಸ್ತೆಯ ಎರಡೂ ಮಗ್ಗಲಲ್ಲಿ ಜಾಲಿ ಗಿಡ ಬೆಳೆದು ಹೋಗುವುದಕ್ಕಾಗುವುದಿಲ್ಲ. ಜನರಿಗೆ ವಾಹನ ಸೌಲಭ್ಯ ಸಹ ಸಿಗದಂತಾಗಿದೆ. ಇರಿಗೇಷನ್ ಹೀಗಿದೆ. ಎಜುಕೇಷನ್ ಹೀಗಿದೆ. ಆರೋಗ್ಯದ ದೃಷ್ಟಿಯಿಂದ ಹೀಗಿದೆ. ಒಟ್ಟಾರೆ ಆದಷ್ಟಲ್ಲದೆ. ಉತ್ತರ ಕರ್ನಾಟಕದ ಬಗ್ಗೆ ಡಾ; ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ ಸಾಕಷ್ಟು ಅನುದಾನ ಬಿಡುಗಡೆಯಾಗಬೇಕಾಗಿತ್ತು. ಮಾನ್ಯ ನಂಜುಂಡಪ್ಪನವರ ರಿಪೋರ್ಟ್ ಪ್ರಕಾರ ಆ ಅನುದಾನ ಬಿಡುಗಡೆಯಾಗಿಲ್ಲ. ಕಳಸ–ಬಂಡೂರಿ ನಾಲಾ ಸಲುವಾಗಿ ಇವತ್ತು ಸಾಕಷ್ಟು ಹೋರಾಟ ನಡೆಯುತ್ತಿದೆ. ಇವತ್ತು ಮಲಪ್ರಭಾ ಪ್ರಾಜೆಕ್ಟ್‌ನಲ್ಲಿ ಇರುವಂತಹ ಸೌಲಭ್ಯ ಏನಿದೆಯೋ ಅದು ಕೇವಲ ಶೇಕಡ 40ರಷ್ಟು ಜನರಿಗೆ ಮಾತ್ರ ನೀರು ಹೋಗಿ ಮುಟ್ಟುತ್ತಿದೆ. ಶೇಕಡ 60ರಷ್ಟು ಜನರಿಗೆ ನೀರು ಹೋಗಿ ಮುಟ್ಟುತ್ತಿಲ್ಲ. ಈಗ ಬೇರೆ ಬೇರೆ ಹೊಸ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದಾರೆಯೇ ಹೊರತಾಗಿ, ಶೇಕಡ 60ರಷ್ಟು ಜನರಿಗೆ ಇರುವಂತಹವರಿಗೇ ಈ ನೀರು ಕೊಡುವ ಸೌಲಭ್ಯ ಇಲ್ಲ. ಅದಲ್ಲದೆ, ಈಗ ಕಳಸ–ಬಂಡೂರಿ ನಾಲಾವನ್ನು ಜೋಡಿಸಬೇಕೆನ್ನುವಂತಹ ಅಭಿಪ್ರಾಯ ನಮ್ಮಿದಿತ್ತು ಅದಕ್ಕೆ ಬೇಕಾಗುವ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿ, ಈಗ ಸಾಕಷ್ಟು ಹೋರಾಟ ನಡೆಯುತ್ತಿದೆ. ಕಳಸ–ಬಂಡಾರಿ ನಾಲಾವನ್ನು ಆ ಮಲಪ್ರಭಾಗೆ ಜೋಡಿಸಬೇಕೆಂದು ಸಾಕಷ್ಟು ಹೋರಾಟ ಮಾಡಿರುವಾಗ, ಈ ಬಜೆಟ್‌ನಲ್ಲಿ ಅದಕ್ಕೆ ಬೇಕಾದ ಕೆಲವೊಂದು ಪ್ರಾವಿಷನ್‌ಗಳನ್ನು ಮಾಡಿಕೊಳ್ಳಬೇಕಾಗಿತ್ತು. ಆ ಪ್ರಾವಿಷನ್‌ಗಳನ್ನು ಮಾಡಿಕೊಂಡಿಲ್ಲ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಏನಾದರೂ ಮಾಡಿ ಕಳಸ–ಬಂಡೂರಿ ನಾಲಾ ಜೋಡಿಸುವಂತಹ ಕೆಲಸ ಆಗಬೇಕು ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ನರೇಂದ್ರಬಾಬುರವರೇ, ತಾವು ಮಾತನಾಡುತ್ತೀರಾ ?

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ಇವತ್ತು ನನಗೆ ಅವಕಾಶ ಸಿಗುತ್ತದೆಂದು ಗೊತ್ತಿರಲಿಲ್ಲ. ದಯಮಾಡಿ ನನಗೆ ಸೋಮವಾರ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಯಾರಾದರೂ ಬಜೆಟ್ ಮೇಲೆ ಮಾತನಾಡುತ್ತೀರಾ ? ಯಾರೂ ಇಲ್ಲವೆಂದು ಕಾಣುತ್ತದೆ. ಈಗ ಖಾಸಗಿ ನಿರ್ಣಯದ ಮೇಲೆ ಚರ್ಚೆ.